# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | (74) 551+501ಎ+496 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ ಮತ್ತು ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20.02.2023 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸರ್ಕಾರವು ಶಾಲೆಗಳಲ್ಲಿ ಶುಚಿ ಸ್ಯಾನಿಟರಿ ನ್ಯಾಪ್ಕಿನ್ ವಿತರಿಸುವ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು: ಇದಕ್ಕೆ ಎಷ್ಟು ವೆಚ್ಚ ಭರಿಸಲಾಗಿದೆ: (ವರ್ಷಾವಾರು ಮಾಹಿತಿ ನೀಡುವುದು) | • 2013-14 ನೇ ಸಾಲಿನಲ್ಲಿ ಶುಚಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸುವ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಪ್ರಸ್ತುತ ಬೇಡಿಕೆಯಂತೆ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳ ಸಂಗ್ರಹಣೆಗಾಗಿ KSMSCL ವತಿಯಿಂದ ಟೆಂಡರ್ ಪೂರ್ಣಗೊಂಡಿದ್ದು, ಸರಬರಾಜಿಗೆ ಕಾರ್ಯಾದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು.<br>• ಆರೋಗ್ಯಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ "ಶುಚಿ" ಕಾರ್ಯಕ್ರಮದನ್ವಯ ಕಳೆದ 5 ವರ್ಷಗಳಲ್ಲಿ ಈ ಕೆಳಗಿನಂತೆ ವೆಚ್ಚ ಮಾಡಲಾಗಿದೆ. |

| ಕ್ರ ಸಂ | ಆರ್ಥಿಕ ವರ್ಷ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | ವೆಚ್ಚವಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2017-18 | 3956.00 | 3948.00 |
| 2 | 2018-19 | 3497.00 | 3334.00 |
| 3 | 2019-20 | ಸ್ಯಾನಿಟರಿ ನ್ಯಾಪ್ಕಿನ್‌ಗಳ ಖರೀದಿಗೆ ಸಂಬಂಧಿಸಿದಂತೆ ಸಂಗ್ರಹಣಾ ಪ್ರಕ್ರಿಯೆ ಹಾಗೂ ದರ ಸಂದಾನ ಸಭೆಗಳು ವಿಫಲವಾದ ಹಿನ್ನೆಲೆಯಲ್ಲಿ ಟೆಂಡರ್ ಪ್ರಕ್ರಿಯೆಯು ವಿಳಂಬವಾಗಿದ್ದು, ನಂತರ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಯಾವುದೇ ಖರೀದಿ ನಡೆದಿರುವುದಿಲ್ಲ. | |
| 4 | 2020-21 | ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಯಾವುದೇ ಖರೀದಿ ನಡೆದಿರುವುದಿಲ್ಲ. | |
| 5 | 2021-22 | KSMSCL ವತಿಯಿಂದ ರೂ. 47 ಕೋಟಿ ವೆಚ್ಚದಲ್ಲಿ ಸಂಗ್ರಹಣೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. | |

...2

<table>
<tr>
<td>ಆ)</td>
<td>ಕಳೆದ ಮೂರು ವರ್ಷಗಳಿಂದ 'ಶುಚಿ' ಯೋಜನೆಯಡಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ವಿತರಿಸದೇ ಸ್ಥಗಿತಗೊಳಿಸಿರುವುದಕ್ಕೆ ಕಾರಣಗಳೇನು: ಇದರಿಂದ ವಿದ್ಯಾರ್ಥಿನಿಯರಿಗೆ ತೀವ್ರ ಅನಾನುಕೂಲ ಆಗಿಲ್ಲವೇ: (ಸಂಪೂರ್ಣ ವಿವರ ನೀಡುವುದು</td>
<td>• ಕಳೆದಮೂರುವರ್ಷಗಳಿಂದ "ಶುಚಿ" ಯೋಜನೆಯಡಿ ವಿವಿಧ ಕಾರಣಾಂತರಗಳಿಂದ ಕಾರ್ಯಕ್ರಮದಡಿ ಸಂಗ್ರಹಣೆ ಪ್ರಕ್ರಿಯೆಯು ವಿಳಂಬವಾಗಿರುತ್ತದೆ ವಿವರಗಳು ಈ ಕೆಳಗಿನಂತಿವೆ.
<table>
<tr><th>ಆರ್ಥಿಕ ವರ್ಷ</th><th>ಸಂಗ್ರಹಣೆ ವಿವರ</th></tr>
<tr><td>2019-20</td><td>ಸ್ಯಾನಿಟರಿ ನ್ಯಾಪ್ಕಿನ್‌ಗಳ ಖರೀದಿಗೆ ಸಂಬಂಧಿಸಿದಂತೆ, ಸಂಗ್ರಹಣಾ ಪ್ರಕ್ರಿಯೆ ಹಾಗೂ ದರ ಸಂದಾನ ಸಭೆಗಳು ವಿಫಲವಾದ ಹಿನ್ನೆಲೆಯಲ್ಲಿ ಟೆಂಡರ್ ಪ್ರಕ್ರಿಯೆಯು ವಿಳಂಬವಾಗಿದ್ದು, ನಂತರ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಯಾವುದೇ ಖರೀದಿ ನಡೆದಿರುವುದಿಲ್ಲ.</td></tr>
<tr><td>2020-21</td><td>ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್ ಗಳ ವಿತರಿಸಲು ಸಾಧ್ಯವಾಗಿರುವುದಿಲ್ಲ.</td></tr>
<tr><td>2021-22</td><td>2021-22ನೇ ಸಾಲಿಗೆ ಒಟ್ಟು ರೂ.4700.00 ಲಕ್ಷಗಳ ಅನುದಾನ ಕಲ್ಪಿಸಲಾಗಿದ್ದು, ಸದರಿ ಅನುದಾನದಡಿ ಸಂಗ್ರಹಣೆಗೆ KSMSCL ರವರ ವತಿಯಿಂದ ಅರ್ಹ 3ನೇ ಟೆಂಡರ್ ಪೂರ್ಣಗೊಂಡಿದ್ದು, ಸರಬರಾಜಿಗೆ ಕಾರ್ಯಾದೇಶ ಹೊರಡಿಸಿ ಮಕ್ಕಳಿಗೆ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳ ಪೂರೈಕೆ ಮಾಡಲಾಗುವುದು.</td></tr>
</table>
</td>
</tr>
<tr>
<td>ಇ)</td>
<td>ಹೆಣ್ಣು ಮಕ್ಕಳು ಶುಚಿ ಸ್ಯಾನಿಟರಿ ನ್ಯಾಪ್ಕಿನ್ ಬಳಸಿದ ನಂತರ ಅವುಗಳನ್ನು ಸಂಪೂರ್ಣವಾಗಿ ಸುಡುವ ಅಥವಾ ಇನ್ನಿತರ ರೀತಿಯಲ್ಲಿ ವಿಲೇ ಮಾಡಲು ಶಾಲೆಗಳಲ್ಲಿ ವ್ಯವಸ್ಥೆ ಮಾಡಿದೆಯೇ:</td>
<td>ಶಾಲೆಯಲ್ಲಿ ಹೆಣ್ಣು ಮಕ್ಕಳು ಬಳಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಒಂದು ಕಾಗದದಲ್ಲಿ ಸುತ್ತಿ ಸ್ಯಾನಿವೇಸ್ಟ್ ಬುಟ್ಟಿಯಲ್ಲಿ ವಿಲೇವಾರಿ ಮಾಡಲು ಶಾಲೆಗಳಿಗೆ ತಿಳಿಸಲಾಗಿರುತ್ತದೆ. ಅದರಂತೆ ವಿಲೇವಾರಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಿಕೊಡುವಂತೆ ಶಿಕ್ಷಣ ಇಲಾಖೆಗೆ ತಿಳಿಸಲಾಗಿರುತ್ತದೆ.<br><br>ಇಲಾಖೆ ವತಿಯಿಂದ ಶುಚಿ ಕಾರ್ಯಕ್ರಮದಡಿ ವಿತರಿಸಲಾಗುತ್ತಿರುವ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್ ಗಳ ಪೊಟ್ಟಣಗಳ ಮೇಲೆ ಬಳಸಿದ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್ ಗಳ ವಿಲೇವಾರಿ ಕುರಿತು ಸ್ಪಷ್ಟ ಮಾಹಿತಿ ಮತ್ತು ಚಿತ್ರಣ ನೀಡಲಾಗಿರುತ್ತದೆ.<br><br>ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನಗಳಂತೆ ಸದರಿ ಬಳಸಿದ ನ್ಯಾಪ್‌ಕಿನ್ ಪ್ಯಾಡ್‌ಗಳ ವಿಲೇವಾರಿಯು ಕಡ್ಡಾಯವಾಗಿ ಮಾನ್ಯತೆ ಪಡೆದ ಏಜೆನ್ಸಿ/ಸಂಸ್ಥೆಯವರಿಂದ ಮಾತ್ರ ಸಂಗ್ರಹಣೆ ಮತ್ತು ವಿಲೇವಾರಿ ನಿರ್ವಹಣೆ ನಿರ್ವಹಿಸಬೇಕಾಗಿರುತ್ತದೆ.</td>
</tr>
</table>

...3

| | | |
|---|---|---|
| ಈ) | ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಕಪ್/ಮರುಬಳಕೆಯ ನ್ಯಾಪ್ಕಿನ್ ವಿತರಿಸುವ ಆಲೋಚನೆ ಸರ್ಕಾರಕ್ಕಿದೆಯೇ; | • ಪರಿಸರ ಸ್ನೇಹಿ ಮತ್ತು ಮರು ಬಳಕೆ ಮಾಡಬಹುದಾದ ಮುಟ್ಟಿನ ಕಪ್ಪುಗಳ ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ಈಗಾಗಲೇ ರಾಜ್ಯ ಸರ್ಕಾರವು ಶುಚಿ ಯೋಜನೆಯಡಿ "ಮೈತ್ರಿ" ಮುಟ್ಟಿನ ಕಪ್ ಯೋಜನೆಯನ್ನು ಪ್ರಾಯೋಗಿಕವಾಗಿ ಚಾಮರಾಜನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರಾರಂಭಗೊಳಿಸಲಾಗಿದೆ. |
| ಉ) | ಕಳೆದ ಬಜೆಟ್‌ನಲ್ಲಿ ಘೋಷಿಸಿದಂತೆ 'ಶುಚಿ' ಯೋಜನೆಯನ್ನು ಉತ್ತಮಪಡಿಸಲು ಮಹಿಳಾ ಸ್ವಸಹಾಯ ಗುಂಪುಗಳೊಂದಿಗೆ ಕೈಜೋಡಿಸಿ ರಾಜ್ಯದ ದಕ್ಷಿಣ ಕನ್ನಡ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದಿರುವ ಮೆನ್‌ಸ್ಟುಯಲ್ ಕಪ್' (ಮುಟ್ಟಿನ ಕಪ್) ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ: (ಸಂಪೂರ್ಣ ವಿವರ ನೀಡುವುದು) | • ಪ್ರಸ್ತುತ ಚಾಮರಾಜನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮೊದಲನೇ ಹಂತದಂತೆ 300 ಫಲಾನುಭವಿಗಳಿಗೆ ತರಬೇತಿಯೊಂದಿಗೆ ಮೈತ್ರಿ ಮುಟ್ಟಿನ ಕಪ್ ಗಳ ವಿತರಣೆ ಮಾಡಲಾಗಿರುತ್ತದೆ.<br>• ದ್ವಿತೀಯ ಹಂತದಲ್ಲಿ 15000 ಮೈತ್ರಿ ಮುಟ್ಟಿನ ಕಪ್‌ಗಳ ಸಂಗ್ರಹಣೆಗಾಗಿ KSMSCL ವತಿಯಿಂದ ಟೆಂಡರ್ ಕರೆಯಲಾಗಿದ್ದು, ಶೀಘ್ರದಲ್ಲಿ ಸಂಗ್ರಹಣೆ ಮತ್ತು ಪೂರೈಕೆಯನ್ನು ಪೂರ್ಣಗೊಳಿಸಲಾಗುವುದು. |
| ಊ) | 2023-24ನೇ ಸಾಲನಿಂದ 'ಶುಚಿ' ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕವೇ ನಿರ್ವಹಿಲಾಗುವುದೇ ಅಥವಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮೂಲಕ ನಿರ್ವಹಿಸಲು ಉದ್ದೇಶಿಸಲಾಗಿದೆಯೇ? (ವಿವರ ನೀಡುವುದು) | ಆರ್ಥಿಕ ಇಲಾಖೆಯು ದಿನಾಂಕ: 09.12.2022 ರಲ್ಲಿ ಆರ್ಥಿಕ ವರ್ಷ 2023-24ನೇ ಸಾಲಿನಿಂದ ಶುಚಿ ಯೋಜನೆಯನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸಲು ಸೂಚಿಸಲಾಗಿದೆ. |

ಸಂಖ್ಯೆ: ಆಕುಕ 17 ಎಸ್.ಟಿ.ಕ್ಯೂ 2023

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು